ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ತಿರುಮಲ ತಿರುಪತಿ ದೇವಸ್ಥಾನ

ಓಂ ಶ್ರೀ ವೇಂಕಟೇಶಾಯ ನಮಃ.

"ಶ್ರೀನಿವಾಸನೆ ಭಕ್ತರ ಬಂಧು, ನಂಬಿಹೆ ರಕ್ಷಿಸು ಬಂದು"

ಎಂದು ಹಾಡಿಕೊಳ್ಳುತ್ತಾ, ಗೋವಿಂದಾ, ಗೋವಿಂದಾ ಅಂತ ಎಲ್ಲಾ ಭಕ್ತರೊಡನೆ ಹೇಳುತ್ತಾ, ಅಂತೂ ತಿರುಪತಿಗೆ ಬರೋ ಭಾಗ್ಯ ಕರುಣಿಸಿದೆಯಲ್ಲ ಅಂತ ಆ ಭಗವಂತನ್ನ ನೆನೆಯುತ್ತಾ, ಪುಷ್ಕರಿಣಿಯಲ್ಲಿ ತೀರ್ಥ ಪ್ರೋಕ್ಷಣೆ ಮಾಡಿಕೊಂಡು, ಕ್ಷೇತ್ರದೇವತೆಯಾದ ವರಾಹಸ್ವಾಮಿಗೆ ಪ್ರದಕ್ಷಿಣೆ, ನಮಸ್ಕಾರ ಮಾಡಿ, ಕ್ಯೂನಲ್ಲಿ ಆನಂದ ನಿಲಯ ದೇವಸ್ಥಾನದ ದ್ವಾರದ ಹತ್ತಿರ ತಲುಪಿ, ಕೆಳಗೆ ಕೊಳವೆಗಳಿಂದ ಬರುತ್ತಿರುವ ನೀರಿನಲ್ಲಿ ಕಾಲುಗಳನ್ನು ತೊಳೆದು, ಬಗ್ಗಿ ಕೆಂಪು Carpet ಹೊಚ್ಚಿರೋ ಹೊಸಿಲಿಗೆ ನಮಸ್ಕಾರ ಮಾಡಿ, ಆಕಡೆ ಈಕಡೆ ಕಟ್ಟಿರೋ ಬಾಳೆಕಂದು, ಶಂಖನಿಧಿ, ಪದ್ಮನಿಧಿ ನೋಡಿಕೊಂಡು, ಹೊಸಿಲು ದಾಟಿ ಒಳಗಡೆ ಹೋಗಿ, ಬಲಕ್ಕೆ ತಲೆ ಎತ್ತಿ ನೋಡಿದರೆ, ಒಂದು ದೊಡ್ಡ ಹಾರೆ ಕಂಡು, ಓ, ಇದರಿಂದಲೇ ಹಿಂದೆ ಅನಂತಾಚಾರ್ಯರು ವೇಂಕಟರಮಣ ಸ್ವಾಮಿಗೆ ಏಟು ಕೊಟ್ಟಾಗ ಅದು ಅವರ ಗಲ್ಲಕ್ಕೆ ತಗುಲಿ ಗಾಯವಾಗಿದ್ದು, ಅದಕ್ಕೇ ಅಲ್ಲವೇ ಇಂದಿಗೂ ಸ್ವಾಮಿಯ ಗಲ್ಲಕ್ಕೆ ಚಂದನ ಹಚ್ಚಿರುತ್ತಾರೆ ಅಂತ ನೆನೆಸ್ಕೊಂಡು, ಸ್ವಾಮಿಯ ಗಲ್ಲದ ಮೇಲಿರುವ ಚಂದನದ ಬೊಟ್ಟು ನೋಡಿದಾಗ ನಾವು ಅನಂತಾಚಾರ್ಯರ ಹೆಸರು ಸ್ಮರಣೆ ಮಾಡಿದರೆ, ಸ್ವಾಮಿ ಪರಮಾನಂದಭರಿತರಾಗ್ತಾರಲ್ಲವಾ ಅಂತ ಆ ಹಾರೆನ ನೋಡಿ, ಆಕಡೆ ಈಕಡೆ ಇರೋ ದೊಡ್ಡ ದೊಡ್ಡ ಜಗುಲಿಗಳನ್ನ ನೋಡಿ, ಮುಂದೆ ಬಂದು, ಎಡಗಡೆ ವೇಂಕಟಪತಿರಾಯರು, ಅಚ್ಯುತರಾಯರು, ವರದರಾಜಮ್ಮಣ್ಣಿಯವರನ್ನು ನೋಡಿ, ಬಲಗಡೆ ತಿರುಗಿದರೆ ಶ್ರೀಕೃಷ್ಣದೇವರಾಯರು, ಚಿನ್ನಾದೇವಿ, ತಿರುಮಲ ದೇವಿಯರನ್ನು ಕಂಡು, ಬುಟ್ಟಿ ಬೋರ್ಲಹಾಕಿದಂತೆ ಇರುವ ಅವರ ಟೋಪಿ ನೋಡಿ, ಅವರು ತಾನಿರುವಾಗಲೇ ಈ ವಿಗ್ರಹಗಳನ್ನ ಇಲ್ಲಿ ಪ್ರತಿಷ್ಠಾಪಿಸಿದರಲ್ಲವೇ ಅಂತ ನೆನೆದು, ಇನ್ನೆರಡು ಹೆಜ್ಜೆ ಮುಂದಕ್ಕೆ ಹೋದ ತಕ್ಷಣ ಎದುರಿಗೆ ಭವ್ಯವಾದ ರಂಗನಾಯಕ ಮಂಟಪ, ಅದರ ಮುಂದೆ ತುಲಾಭಾರ, ಒಂದು ಪುಟ್ಟ ಮಗುವನ್ನು

ಒಂದೆಡೆ ಕೂಡಿಸಿ, ಇನ್ನೊಂದೆಡೆ ಕಲ್ಲುಸಕ್ಕರೆ, ನಾಣ್ಯಗಳನ್ನು ಹಾಕ್ತಾಇರೋದನ್ನ ನೋಡಿ, ಓ ಮಹಾನುಭಾವಾ ಎಷ್ಟು ಜನರಿಗೆ ಸಂತಾನ ಭಾಗ್ಯ ಕೊಟ್ಟು ಕರುಣಿಸಿದ್ದೀಯಪ್ಪಾ ಅಂತ ದೇವರಿಗೆ ಕೈಮುಗಿದು, ನಂಬಿದವರಿಗೆ ಸ್ವಾಮಿಯ ಕರುಣೆ ಅಪಾರ "ಪುತ್ರ ಸಂತಾನವನು, ಪೂರ್ಣ ಭಾಗ್ಯವನು, ಛತ್ರ ಚಾಮರ ಅಳವಟ್ಟ ಸೌಖ್ಯವನು, ನಿತ್ಯ ಕಲ್ಯಾಣವನು, ನಿತ್ಯೋತ್ಸವಗಳನು ಆರ್ತಿಯಿಂದಲಿ ಈವ, ಸಿರಿಪತಿ ಶ್ರೀ ಶ್ರೀನಿವಾಸನೆ ನಿನ್ನೆಯ ಮೊರೆಯ ಹೊಕ್ಕೆನೋ ಎನ್ಮೊರೆಯ ಆಲಿಸೊ" ಅಂತ ಶ್ರೀ ವೇಂಕಟೇಶಾ, ತಿರುಮಲಗಿರಿವಾಸಾ ಶ್ರೀ ವೇಂಕಟೇಶಾ ಅಂತ ಪ್ರಾರ್ಥಿಸ್ತಾ, ಮಾಲಿಕಾವೂರ್ ಶ್ರೀರಂಗದ ಮೇಲೆ ದಂಡಯಾತ್ರೆಗೆ ಬಂದಾಗ ಅಲ್ಲಿದ್ದ ಶ್ರೀ ರಂಗನಾಥಸ್ವಾಮಿಯನ್ನು ಇಲ್ಲಿಗೆ ತಂದು ಆರಾಧನೆ ಮಾಡಿದ್ದರಿಂದ ಈ ಮಂಟಪಕ್ಕೆ ರಂಗನಾಯಕ ಮಂಟಪ ಎಂದು ಹೆಸರು ಬಂದಿದೆ ಅಂತ ಬರೆದಿರೋ ಹಿತ್ತಾಳೆ Board ಓದಿ, ತಿರುಮಲರಾಯ ಮಂಟಪ, ಅಲ್ಲಿರುವ ಒಂದು ಪುಟ್ಟ ದೇವಸ್ಥಾನ, ತೋಡರಮಲ್ ಮೋಹನಾಂಗಿ ಇವರೆಲ್ಲರ ವಿಗ್ರಹಗಳನ್ನು ದಾಟಿಕೊಂಡು ಸ್ವಲ್ಪ ಮುಂದೆ ಹೋದರೆ, ಕಲ್ಯಾಣ ಮಂಟಪ, ದೊಡ್ಡ ದೊಡ್ಡ ಎರಡು ಆಸನಗಳು, Square square Shape ನಲ್ಲಿ ಇರೋ ಹಿತ್ತಾಳೆ fence, ದೊಡ್ಡ ದೊಡ್ಡ Pedestrian Fanಗಳು, ಹಿತ್ತಾಳೆ ಕವಾಟಗಳಿರುವ fence, ಇವನ್ನೆಲ್ಲಾ ದಾಟಿ ಮುಂದೆ ಹೋದರೆ, ಧ್ವಜಸ್ತಂಭ, ಬಲಿಹರಣ ಮಂಟಪ, ಅದರ ಮೇಲೆ ಇಟ್ಟಿರುವ ಅನ್ನ, ಮೂಲೇಲಿ ಇನ್ನೊಂದು ಬಲಿಹರಣ ಮಂಟಪ, ಧ್ವಜಸ್ತಂಭಕ್ಕೆ ಕಟ್ಟಿರುವ ದೊಡ್ಡ ದೊಡ್ಡ ಧರ್ಭೆ, ದೊಡ್ಡ ಹೊಸಿಲು, ಕಾಶೀರಾಮ್ ಬಾವಾಜೀ ಪಗಡೆ ಆಡ್ತಾ ಇರೋ ದೃಶ್ಯ, ತಲೆ ಮೇಲೆತ್ತಿ ನೋಡಿದರೆ ಆನಂದ ನಿಲಯ ಗೋಪುರ, ಅದರ ಕೆಳಗಡೆ ಪವಡಿಸಿರುವ ರಂಗನಾಥ ಸ್ವಾಮಿಯನ್ನ ನೋಡಿ, ನಮಸ್ಕರಿಸಿ, ಮೆಟ್ಲು ಇಳಿದು ಕೆಳಗಡೆ ಬಂದು ದೊಡ್ಡ ಕೆಂಪು ಅಂಚಿರುವ ರೇಷ್ಮೆ ಪಂಚೆಯಲ್ಲಿರುವ ವರದರಾಜ ಸ್ವಾಮಿಗೆ ಪ್ರದಕ್ಷಿಣೆ ಮಾಡಿ, ನಮಸ್ಕಾರ ಮಾಡಿ, ಬಲಗಡೆ ತಿರುಗಿದರೆ, ಓಂ ನಮೋ ವೇಂಕಟೇಶಾಯ ಅಂತ ಆನಂದನಿಲಯದ ಒಳಗಿನಿಂದ ಕೇಳಿಸ್ತಾ ಇದ್ರೆ, ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಆನಂದನಿಲಯದ ಒಳಕ್ಕೆ ಹೋದರೆ, ತಾವರೆ ಹೂಗಳ ಗೊಂಚಲಿನಂತೆ ಇರುವ Chandeliers ನೋಡಿ, ಎಡಗಡೆ ಒಂದು ಕಂಬದಲ್ಲಿರುವ ವರಾಹಸ್ವಾಮಿಗೆ ನಮಸ್ಕರಿಸಿ, ಮುಂದೆ ಗರಿ ಬಿಚ್ಚಿರುವ ಗರುತ್ಮಂತನಿಗೆ ವಂದಿಸಿ, ಅಭಿಮುಖವಾಗಿ ತಿರುಗಿದರೆ, ಎರಡೂ ಪಕ್ಕಗಳಲ್ಲಿ ದೀಪಕನ್ಯೆಯರ ವಿಗ್ರಹಗಳು ನಮಗೆ ಸ್ವಾಗತ ಹೇಳುತ್ತಿರುವಂತೆ

ಕಂಡು, ಜಯ ವಿಜಯರು ಸ್ವಲ್ಪ ಎತ್ತರವಾದ ಹಲಗೆಯ ಮೇಲೆ ನಿಂತಿರುವುದನ್ನು ನೋಡಿ, ಮುಂದೆ ನೋಡಿದರೆ, ಮಿರ ಮಿರನೆ ಮಿಂಚುತ್ತಿರುವ ಕಪ್ಪು ಮುಖ, ಕಸ್ತೂರಿ ಶ್ರೀಗಂಧದ ತಿಲಕ, ಇಷ್ಟಿಷ್ಟು ಊರ್ಧ್ವಪುಂಡ್ರಗಳು, ಮುದ್ದಾದ ಕಪೋಲಗಳು, ಗಲ್ಲಕ್ಕೆ ಗಂಧದ ಬೊಟ್ಟು, ಕಿವಿಯಲ್ಲಿ ಫಳ ಫಳ ಅಂತ ಹೊಳೀತಾ ಇರೋ ವಜ್ರಖಚಿತ ಕುಂಡಲಗಳು, ತಲೆಯ ಮೇಲೆ ವಜ್ರ ವೈಢೂರ್ಯ ಖಚಿತವಾದ ಕೋಟಿಸೂರ್ಯ ಪ್ರಕಾಶವುಳ್ಳ ಕಿರೀಟ, ಅದರಿಂದ ಕೆಳಕ್ಕೆ ಅಲಂಕರಿಸಿರುವ ತೋಮಾಲೆ, ಬಲಗೈಯ್ಯಲ್ಲಿ ಶಂಖ, ಎಡಗೈಯ್ಯಲ್ಲಿ ಚಕ್ರ, ಇಷ್ಟು ಕಾಣಿಸೋ ಹೊತ್ತಿಗೆ, ಭಕ್ತಿ ಪಾರವಶ್ಯದಿಂದ ಗೋವಿಂದಾ ಗೋವಿಂದಾ ಅಂತ ನಾವು ಒಳಗೆ ಹೋಗ್ತಾ ಇದ್ದರೆ, ನಾವು ಹೋಗ್ತಾ ಇದಿವೋ ಅಥವಾ ನಮ್ಮನ್ನ ತಳ್ತಾ ಇದಾರೋ ಅನ್ನೋದೂ ಗೊತ್ತಾಗದ ಸ್ಥಿತಿಯಲ್ಲಿ ಮುಂದಕ್ಕೆ ಹೋದರೆ, ಆ ತೋಮಾಲೆ ತೂಗಾಡ್ತಾ ಇದ್ದರೆ, ಸ್ವಾಮಿಯ ವಕ್ಷಸ್ಥಳದಲ್ಲಿ ಶ್ರೀದೇವಿ, ಭೂದೇವಿಯರು, ಅವರಿಗೆ ಸುತ್ತಲೂ ಇರುವ ಹೂಮಾಲೆ, ಶ್ರೀವತ್ಸ ಲಾಂಛನ, ಉನ್ನತವಾದ ಕೌಸ್ತುಭ, ಮಹಾನುಭಾವನಿಗೆ ಅಲಂಕರಿಸಿರುವ ದೊಡ್ಡ ದೊಡ್ಡ ಸಾಲಿಗ್ರಾಮದ ಹಾರಗಳು, ಲಕ್ಷ್ಮೀ ಹಾರಗಳು, ಚಂದದ ನಡುವಿಗೆ ಬ್ರಹ್ಮಾಂಡವಾದ ಡಾಬು, ಅದರ ಮೇಲಿರುವ ದಶಾವತಾರಗಳು, ಸುವರ್ಣ ಯಜ್ಞೋಪವೀತ, ಕೈಯ್ಯಲ್ಲಿ ಹಿಡಿದಿರುವ ನಂದಕಿ ಖಡ್ಗ, ಬಲಿಷ್ಟವಾದ ತೊಡೆಗಳು, ಕಾಲಿಗೆ ಹಾಕಿರುವ ಮಂಜೀರಗಳು, ಎಲ್ಲೂ ಕಾಣಿಸದಂತಹ ಅಪರೂಪವಾದ ಮೊಣಕಾಲಿಗೂ ಪಾದಕ್ಕೂ ಮಧ್ಯ ಇರುವ ಮಂಜೀರಗಳು, ಕಾಂತಿಯುಕ್ತವಾದ ವರದ ಅಭಯಹಸ್ತ, ಎಲ್ಲವನ್ನೂ ನೋಡಿ, ಭಕ್ತಿಪರವಶರಾಗಿ,

“ಇಂದಿರೇಶ ಪಾಲಿಸೆಂದು ಇಂದು ಸಾರಿದೆ, ಇಂದು ಬಂದು ಬೇಡಿದೆ,
ಕಷ್ಟವ ಬಿಡಿಸೋ ಕರುಣಾಂಬುಧಿಯೇ, ಶಿಷ್ಟರಿಗಿಷ್ಟಾರ್ಥವ ಈವ ದೊರೆಯೇ,
ಪರಮಪುರುಷ ಪರಂಜ್ಯೋತಿ ಸ್ವರೂಪ, ಪರಾಪರೋಸ್ತುತೆ ಪಾವನ ಮೂರುತಿ,
ಪರಶುರಾಮ ಹರಿ ಪನ್ನಗಶಾಯಿ, ಹರಿ ಸರ್ವೋತ್ತಮ ಹರಿದಾಸರ ದೊರೆಯೇ,
ಹರುಷದಿ ಎನ್ನನು ಹರಸಿ ಪಾಲಿಸೋ”

ಅಂತ ಆ ಭಗವಂತನನ್ನು ಬೇಡುತ್ತಾ, ಯಾರು ಈ ಕಲಿಯುಗದಲ್ಲಿ ನನ್ನ ಪಾದಗಳನ್ನು ನಂಬುತ್ತಾರೋ ಅವರಿಗೆ ಕಷ್ಟ ಪರಿಹಾರ ಮಾಡ್ತೀನಿ ಅಂತ ಹೇಳ್ತಾ ಇರೋ ಅಭಯ ಪಾದಗಳಿಗೆ ಪೂಜೆ ಮಾಡಿರೋ ಬೆಳ್ಳಿ ಹೂಗಳನ್ನು ನೋಡಿ, ಕೆಳಗಡೆ ಇರುವ ಭೋಗಾ ನರಸಿಂಹ, ಬಲಗಡೆ

ಇರುವ ಉಗ್ರ ಶ್ರೀನಿವಾಸ, ಸೀತಾ ಲಕ್ಷ್ಮಣ ಸಮೇತ ಶ್ರೀರಾಮ, ರುಕ್ಮಿಣೀ ಸಹಿತ ಶ್ರೀಕೃಷ್ಣ ಎಲ್ಲರಿಗೂ ನಮಸ್ಕರಿಸಿ, ಪರಮೇಶ್ವರನ ಪಾದಗಳನ್ನು ಗಟ್ಟಿಯಾಗಿ ಹಿಡಿದು, ಅವನ ಪಾದಗಳ ಮೇಲೆ ಬಿದ್ದು, ಪಾದಗಳನ್ನು ತಲೆಯಮೇಲೆ ಇಟ್ಟುಕೊಂಡು, ಆಪಾದಮಸ್ತಕ ಆ ತೇಜೋಮೂರ್ತಿಯನ್ನು ನೋಡಿ, ಪರವಶವಾಗಿ ಅವನ ಸುಂದರ ಸ್ವರೂಪವನ್ನು ಕಣ್ತುಂಬಿಕೊಂಡು,

"ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ"

ಅಂತ ಪ್ರಾರ್ಥಿಸಿ, ಸ್ವಾಮಿಯ ಸನ್ನಿಧಿಯನ್ನು ಬಿಟ್ಟು ಬರಲು ಇಷ್ಟವಿಲ್ಲದೇ, ಹಿಂದಕ್ಕೆ ತಿರುಗಿ ನೋಡಿಕೊಂಡು, ಆಭರಣಗಳಿಂದ ತುಂಬಿಹೋಗಿ ಅಲ್ಲಲ್ಲಿ ಮಾತ್ರಾ ಕಾಣುತ್ತಿರುವ ಪಂಚೆ ನೋಡಿ, ಮತ್ತೆ ಯಾವಾಗ ನಿನ್ನನ್ನು ನೋಡ್ತೀನೋ ನನ್ನಪ್ಪಾ ಅಂತ ಅಂದ್ಕೊಂಡು, ಗೋವಿಂದಾ ಗೋವಿಂದಾ ಅಂತ ಹೆಜ್ಜೆ ಹಿಂದಕ್ಕೆ ಹಾಕಿ, ಮತ್ತೆ ಮತ್ತೆ ದೇವರ ದರ್ಶನ ಮಾಡಿ, ಆ ನಾಮ, ಕಿರೀಟ, ತೋಮಾಲೆ ಎಲ್ಲಾ ನೋಡಿ, "ಪುನರ್ದರ್ಶನ ಪ್ರಾಪ್ತಿರಸ್ತು" ಅಂತ ಬೇಡಿಕೊಂಡು, ಹೊರಕ್ಕೆ ಬಂದು ಘಂಟಾ ಮಂಟಪ ನೋಡಿ, ಸ್ವಾಮಿಯವರ ಉತ್ತರ ದ್ವಾರದಲ್ಲಿ ಶೇಷಶಯನನಾಗಿರುವ ಶ್ರೀ ಮಹಾ ವಿಷ್ಣುವನ್ನು ನೋಡಿ, ಸ್ವಲ್ಪ ಮುಂದಕ್ಕೆ ಬಂದು, ಬಲಕ್ಕೆ ಭೂದೇವಿ ತೀರ್ಥ ಬಾವಿ ನೋಡಿ, ಮೆಟ್ಟಲು ಹತ್ತಿ ಎಡಗಡೆ ಬಕುಳಮಾತೆಯನ್ನು ನೋಡಿ, ಹಿಂದೆ ಕೃಷ್ಣನಿಗೆ ಯಶೋದೆಯಾಗಿದ್ದು, ಈಗ ವೇಂಕಟೇಶ್ವರನಿಗೆ ತಾಯಿಯಾಗಿರುವವಳು ನೀನೇ ಅಲ್ಲವೇ ಅಂತ ಆ ತಾಯಿಗೆ ನಮಸ್ಕರಿಸಿ, ಅಮ್ಮಾ, ವೇಂಕಟರಮಣನಂಥವನು ರಾತ್ರಿ ಹೊತ್ತು ಮಲಗುವ ಮುನ್ನ ಬಂದು ನಿನ್ನ ಕಾಲನ್ನು ಒತ್ತುತ್ತಾನಲ್ಲವೇ, ಸೊಸೆಯಾದ ಲಕ್ಷ್ಮೀದೇವಿಯು ನಿನ್ನ ಪಾದಸೇವೆ ಮಾಡುತ್ತಾಳಲ್ಲವೇ, ಮಾತೃಸ್ಥಾನಕ್ಕೆ ಎಂತಹ ಅಗ್ರ ಸ್ಥಾನವನ್ನು ಕೊಟ್ಟಿದ್ದಾರೆ ಈ ಆದಿದಂಪತಿಗಳು ಅಂತ ಅಂದ್ಕೊಂಡು, ನಮಗೂ ತಾಯಿಯ ಸೇವೆ ಮಾಡು ಎನ್ನುವ ಪಾಠವನ್ನು ಆ ಸ್ವಾಮಿಯು ಹೇಳ್ತಾ ಇದ್ದಾನೆ ಅಂತ ಆ ತಾಯಿಗೆ ನಮಸ್ಕಾರ ಮಾಡಿ, ಎದುರಿಗೆ ಇರುವ ಪಾಕಶಾಲೆಯನ್ನು ತನ್ನ ಮಗನಿಗೆ ಸರಿಯಾಗಿ ಅಡುಗೆ ಮಾಡಿ ಕೊಡ್ತಾರೋ ಇಲ್ಲವೋ ಅಂತ ತದೇಕವಾಗಿ ನೋಡ್ತಾ ಇರುವ ಬಕುಳಮಾತೆಗೆ ಇನ್ನೊಮ್ಮೆ ವಂದಿಸಿ, ಮುಂದಕ್ಕೆ ಬಂದು, ದೊಡ್ಡ ಶಠಾರಿಯನ್ನು ತಲೇಮೇಲೆ ಅವರು ಇಟ್ಟರೆ ತಲೆ ಪೂರ್ತಿ ಅದರಲ್ಲಿ ಹಿಡಿಸಿ, ದೊಡ್ಡ ಉದ್ದರಣೆ ತುಂಬಾ ಕೊಟ್ಟ ತೀರ್ಥವನ್ನು ಕಣ್ಣಿಗೆ ಒತ್ತಿಕೊಂಡು ಸ್ವೀಕರಿಸಿ, ಮುಂದೆ ಆಜ್ಞಾಧಾರಕ ಹನುಮ ಬಾಯಿಗೆ ಕೈ ಅಡ್ಡ ಇಟ್ಟುಕೊಂಡಿರುವುದನ್ನು ನೋಡಿ,

ಬಲಕ್ಕೆ ತಿರುಗಿ ಪರಕಾಮಣಿ ನೋಡಿ, ನಿನ್ನ ಐಶ್ವರ್ಯ ಅಪಾರ ಅಂತ ಎಲ್ಲಾರೂ ದುಡ್ಡು ಎಣಿಸ್ತಾ ಇರೋದನ್ನ ನೋಡಿ, ಮತ್ತೊಮ್ಮೆ ಆನಂದನಿಲಯದ ಗೋಪುರವನ್ನು ನೋಡಿ, ಇಲ್ಲಿ ಕರ್ಪೂರ ಹತ್ತಿಸಬಾರದು ಅನ್ನೋ ಬೋರ್ಡ್ ಓದಿ, ಬಲಕ್ಕೆ ಚಂದನವನ್ನು ತೇಯ್ತಾ ಇರುವ ಅಂತರಂಗಿಕ ಸೇವಕರನ್ನು ನೋಡಿ, ಮೆಟ್ಟಿಲ ಮೇಲೆ ನಿಂತು ಬೆಳ್ಳಿಯ ಬಾಣ Direction ತೋರಿಸ್ತಾ ಇದ್ದರೆ ವಿಮಾನ ವೇಂಕಟೇಶ್ವರನನ್ನು ನೋಡಿ, ಎಡಗಡೆ ಗರುತ್ಮಂತನನ್ನು ನೋಡಿ, ಮುಂದೆ ಮೆಟ್ಟಿಲು ಹತ್ತಿ ರಾಮಾನುಜಾಚಾರ್ಯರಿಗೆ ನಮಸ್ಕಾರ ಮಾಡಿ, ರೇಶಿಮೆ ಪಂಚೆಯುಟ್ಟು, ಅಭಯಹಸ್ತ ತೋರುತ್ತಿರುವ ಯೋಗಾನರಸಿಂಹಸ್ವಾಮಿಯ ದರ್ಶನ ಮಾಡಿ, ಪ್ರದಕ್ಷಿಣೆ ನಮಸ್ಕಾರ ಮಾಡಿ, ಹರಕೆ ಹುಂಡಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಿ, ಒಳಕ್ಕೆ ಕೈ ಹಾಕಿ ಕಾಣಿಕೆ ಸಮರ್ಪಿಸಿ, ಎಡಗಡೆ ಲಕ್ಷ್ಮೀ ದೇವಿಗೆ ನಮಸ್ಕರಿಸಿ, ಮುಂದಕ್ಕೆ ಬಂದು ಅಲ್ಲಿ ಬಗ್ಗಿ ನಮಸ್ಕಾರ ಮಾಡಿದಾಗ ತಣ್ಣಗೆ ನೆಲ ತಗುಲಿದರೆ, ವೇಂಕಟೇಶ್ವರಾ ನನ್ನ ತಂಪಾಗಿ ಕಾಯಪ್ಪಾ ಅಂತ ಬೇಡಿಕೊಂಡು, ಎಡಕ್ಕೆ ತಿರುಗಿ ಹೊರಕ್ಕೆ ಬಂದು, ಪ್ರಸಾದವನ್ನು ತೊಗೊಂಡು, ಹೂವಿನ ಬಾವಿ ಹತ್ತಿರ ಸುವಾಸನೆಯಿಂದ ಕೂಡಿದ ಆ ಪ್ರಸಾದವನ್ನು ತಿಂದು, ಮತ್ತೆ ಕೆಂಪು ಬಣ್ಣದ Carpet, ಮೇಲಿರುವ ಹಾರೆ ಎಲ್ಲಾ ನೋಡಿ, ಹೊರಕ್ಕೆ ಬಂದು, ಇನ್ನೊಂದು ಸಲ ಧ್ವಜಸ್ತಂಭ, ಬಲಿಹರಣ ಮಂಟಪ ಎಲ್ಲಾ ನೋಡಿ,

"ಆಪದ್ಬಾಂದವಾ, ಅನಾಥರಕ್ಷಕಾ, ಆಪದೋದ್ಧಾರಕಾ, ನಿನ್ನ ನಂಬಿದೆ ನೀರಜನಾಭನೇ"

ಅಂತ ಸ್ಮರಣೆ ಮಾಡಿ, ನಿನ್ನ ಪಾದಸ್ಮರಣೆಯನ್ನೇ ಅಂತರ್ಮುಖವಾಗಿ, ಬಹಿರ್ಮುಖವಾಗಿ ದಯಪಾಲಿಸೋ ತಂದೆ, ಇದಕ್ಕಿಂತ ನನಗೇನೂ ಬೇಕಿಲ್ಲ ಅಂತ ಬೇಡಿಕೊಂಡು,

"ಕಂಡೆ ಕಂಡೆ ಸ್ವಾಮಿಯಾ ಬೇಡಿಕೊಂಡೆ, ಕಂಡೆ ತಿರುಪತಿ ವೇಂಕಟೇಶನ
ಕಾರಣಾತ್ಮಕ ಸಾರ್ವಭೌಮನ"

ಅಂತ ಆ ಸ್ವಾಮಿಯನ್ನ ಕೀರ್ತಿಸುತ್ತಾ, ಆ ಸ್ವಾಮಿಯ ದರ್ಶನದಿಂದ ಆದ ಧನ್ಯತಾ ಭಾವದಿಂದ ತೃಪ್ತಿಯಿಂದ ತುಂಬಿದ ಮನಸ್ಸಿನೊಂದಿಗೆ "ಪುನರ್ದರ್ಶನ ಪ್ರಾಪ್ತಿರಸ್ತು" ಅಂತ ಬೇಡಿಕೊಂಡು ಬಂದಾಗ, ತಿರುಮಲ ತಿರುಪತಿಯಲ್ಲಿ ಆನಂದ ನಿಲಯದಲ್ಲಿರುವ ಶ್ರೀವೇಂಕಟೇಶ್ವರನ ದರ್ಶನ ಆಯಿತಲ್ವಾ?

## ಶ್ರೀ ಅಚ್ಯುತಾನಂತ ಗೋವಿಂದೇಭ್ಯೋ ನಮಃ